**<u>3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಪಿ. ಅಂಡ್ ಎಸ್.ಸಿ. ಸಂಖ್ಯೆಃ 25/2022</u>**

ದಿನಾಂಕಃ 24.10.2024
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಅ.ಸಾ. - 2

**<u>ಮುಖ್ಯವಿಚಾರಣೆಃ- ಅರ್ಜಿದಾರರ ಪರ ಶ್ರೀ.ಆರ್.ಬಿ.ಎಸ್ ವಕೀಲರಿಂದಃ</u>**

ನಾನು ನನ್ನ ಮುಖ್ಯ ವಿಚಾರಣೆ ಸಾಕ್ಷ್ಯವಾಗಿ ಶಪಥ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳನ್ನು ನಾನು ಹೇಳಿ ಬರೆಸಿದ್ದು, ಬರೆದ ನಂತರ ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನನ್ನ ಶಪಥ ಪತ್ರದಲ್ಲಿ ಬರೆಸಿರುವ ಸಂಗತಿಗಳು ಎಲ್ಲಾ ಸತ್ಯವಾಗಿರುತ್ತದೆ.

ಸಾಕ್ಷಿ ತನಗೆ ತೋರಿಸಿದ ದಾಖಲೆಯಲ್ಲಿನ ಕೊನೆ ಪುಟದಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಸಹಿ ಇರುವ ದಿನಾಂಕ 10.02.2018 ರ ಮೂಲ ವಿಲ್ ಯಾ ಮರಣ ಶಾಸನ ಪತ್ರವನ್ನು **ನಿಶಾನೆ ಪಿ 27** ಎಂದು ಮತ್ತು ಸಾಕ್ಷಿ ಸಹಿಯನ್ನು **ನಿ.ಪಿ.27** ಎ ಎಂದು ಗುರುತಿಸಲಾಯಿತು. **ನಿಶಾನೆ ಪಿ -27** ರ ಪ್ರತಿ ಪುಟಕ್ಕೆ ನನ್ನ ಮುಂದೆ ಶ್ರೀಮತಿ. ಮುನಿಬೈರಮ್ಮ ತನ್ನ ಎಡಗೈ ಹೆಬ್ಬೆರಳ ಗುರುತು ಹಾಕಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ರಾಘವೇಂದ್ರ ಜಿ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.